ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ನಿಜ;

ಆ) ನಿಜ.

ಇ) ಬಂದಿದೆ.

ಈ) ಸದರಿ ಕೆಲಸವನ್ನು ''ಟರ್ನ್ ಕೀ'' ಆಧಾರದ ಮೇಲೆ ಮೆ॥ ಪ್ರೋಲ್ಟಾಸ್ ಕಂಪನಿಯವರಿಗೆ ನಿರ್ವಹಿಸಿರುವುದರಿಂದ ಹಾನಿಯು ಹೊಣೆಗಾರಿಕೆ ಅವರದೇ ಆಗಿರುತ್ತದೆ. ನುರಿತ ಕಾರ್ಯಗಳನ್ನು ಗುಣಮಟ್ಟ ಹಾಗೂ ಸಮರ್ಪಕವಾಗಿ ಕಂಪನಿಯವರು ಪೂರ್ಣಗೊಳಿಸದಿದ್ದಲ್ಲಿ ಕಾನೂನಿನ ಪ್ರಕಾರ ಕಂಪನಿಯ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಉ) ಪರಿಶೀಲಿಸಲಾಗುವುದು.

ಕುರಣಿ ಹಾಗೂ ಕೋಚರಿ ಕಾಲುವೆಗಳ ನಿರ್ಮಾಣ

೧೯೫. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುರಣಿ ಹಾಗೂ ಕೋಚರಿ ಕಾಲುವೆಗಳ ನಿರ್ಮಾಣದಲ್ಲಿ ತಡವಾಗುತ್ತಲಿರುವುದಕ್ಕೆ ಕಾರಣವೇನು,

ಆ) ಸದರಿ ಕಾಲುವೆಗಳಿಂದ ಆಗುವ ನೀರಾವರಿ ಕ್ಷೇತ್ರವೆಷ್ಟು,

ಇ) ಈ ಎರಡೂ ಕಾಲುವೆಗಳ ಯಾತ ನೀರಾವರಿ ಕಾಲುವೆಗಳ ನಿರ್ಮಾಣದಲ್ಲಿನ ತೊಂದರೆಗಳನ್ನು ಸರಿಪಡಿಸಲು ಸರ್ಕಾರದಿಂದ ತೀವ್ರಕ್ರಮ ಕೈಕೊಳ್ಳುವುದಕ್ಕಾಗಿ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು,

ಈ) ಕೋಚರಿ ಯಾತ ನೀರಾವರಿ ಕಾಲುವೆಯ ಗಾತ್ರವನ್ನು ಅಗಲಗೊಳಿಸಿ ಶ್ರೀ ಹಿರಣ್ಯಕೇಶಿ ನದಿಯ ಮೇಲಿರುವ ಗೋಟೂರ ಪೇರದವರೆಗೆ ಕಾಲುವೆಯನ್ನು ಮುಂದುವರಿಸಲು ತಡವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಪ್ರಮುಖವಾಗಿ ಭೂ ಸ್ವಾಧೀನ ಸಮಸ್ಯೆಗಳು ಮತ್ತು ಕೆಲವು ಭೂ ಮಾಲೀಕರು ನಾ ಯಾಲಯಕ್ಕೆ ಹೋಗಿರುವುದರಿಂದ ಸ್ವಲ್ಪ ವಿಳಂಬವಾಗಿದೆ.

ಆ) ೧. ಕುರಣಿ ಫ್ಲೋ ಕಾಲುವೆಯಿಂದ ... ೬೮೮ ಹೆಕ್ಟೇರು

೨. ಕುರಣಿ ಯಾತ ನೀರಾವರಿ ಕಾಲುವೆ

ಮೊದಲನೆಯ ಹಂತ ... ೧೮೨೧ ಹೆಕ್ಟೇರು

ಎರಡನೇಯ ಹಂತ ... ೧೪೧೭ ಹೆಕ್ಟೇರು

ಮೂರನೇಯ ಹಂತ ... ೫೬೭ ಹೆಕ್ಟೇರು

ನಾಲ್ಕನೆಯ ಹಂತ ... ೩೪೮ ಹೆಕ್ಟೇರು

೩. ಕೋಚರಿ ಫ್ಲೋ ಕಾಲುವೆ ... ೫೩೪ ಹೆಕ್ಟೇರು

೪. ಕೋಚರಿ ಯಾತ ಕಾಲುವೆ ... ೧೪೬೫ ಹೆಕ್ಟೇರು

ಇ ಈ ಕಾಲುವೆಗಳ ನಿರ್ಮಾಣ ಕಾರ್ಯಗಳು ಯೋಚಿಸಿದಂತೆ ಪೂರ್ತಿಗೊಳಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಈ) ಅನ್ವೇಷಣಾ ಹಂತದಲ್ಲಿದೆ.